2003-04 (ಲಕ್ಷ ರೂ.ಗಳಲ್ಲಿ)

ಜಿಲ್ಲೆ	3054	ನಬಾರ್ಡ್	ಸಿಆರ್ಎಫ್	ಒಟ್ಟು
ದಕ್ಷಿಣ ಕನ್ನಡ	453.53	295.00	277.00	1025.53
ಉಡುಪಿ	506.79	150.00	266.00	922.79
ಒಟ್ಟು	**960.32**	**445.00**	**543.00**	**1948.32**

ಆ) ಅಭಿವೃದ್ಧಿಗೊಳಿಸಿದ ರಸ್ತೆಗಳ ಸಂಖ್ಯೆ ವಿವರ ಈ ಕೆಳಕಂಡಂತಿದೆ :-

2002-03 (ಸಂಖ್ಯೆ)

ಜಿಲ್ಲೆ	3054	ನಬಾರ್ಡ್	ಸಿಆರ್ಎಫ್	ಒಟ್ಟು
ದಕ್ಷಿಣ ಕನ್ನಡ	78	6	–	84
ಉಡುಪಿ	61	22	33	86
ಒಟ್ಟು	**139**	**28**	**3**	**170**

2003-04 (ಸಂಖ್ಯೆ)

ಜಿಲ್ಲೆ	3054	ನಬಾರ್ಡ್	ಸಿಆರ್ಎಫ್	ಒಟ್ಟು
ದಕ್ಷಿಣ ಕನ್ನಡ	78	21	5	104
ಉಡುಪಿ	324	27	6	357
ಒಟ್ಟು	**402**	**48**	**11**	**461**

....

133 (153) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಂಟ್ವಾಳ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕಿರು ನೀರಾವರಿ ಯೋಜನೆಗಳ ಅನುಷ್ಠಾನ, ದುರಸ್ಥೀಕರಣ, ನವೀಕರಣದ ವಿವರಗಳೇನು; ಹಾಗೂ ಇವುಗಳಿಗಾಗಿ ಮಾಡಿದ ವೆಚ್ಚವೆಷ್ಟು;

ಆ) ಸದರಿ ಕಾಮಗಾರಿಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳೆಷ್ಟು; ಹಾಗೂ ಅಪೂರ್ಣವಾಗಿರುವ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಇ) 2003-04ನೇ ಸಾಲಿಗೆ ಮಂಜೂರಾದ ಕಾಮಗಾರಿಗಳ ವಿವರಗಳೇನು;

ಈ) ನದಿ ಬದಿ ತಡೆಗೋಡೆ ಹಾಗೂ ನೀರಿನ ಕೊರತೆ ಇರುವ ಕೃಷಿ ಭೂಮಿಗೆ ತಡೆಗೋಡೆಗಳನ್ನು ನಿರ್ಮಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಇ) ಯಾವುದೇ ಹೊಸ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.

ಈ) ಇಂತಹ ಯಾವುದೇ ಪ್ರಸ್ತಾವನೆಗಳಿಲ್ಲ.

ವಿಧಾನಸಭಾ ಶಾಸಕರಾದ ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ : 153

ಅನುಬಂಧ

ಅನುಷ್ಠಾನಗೊಳಿಸಲಾದ ಯೋಜನೆ

ಕ್ರ.	ಯೋಜನೆಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ)	ಅಚ್ಚುಕಟ್ಟು ಹೆಕ್ಟೇರು ಗಳಲ್ಲಿ)	6:04ರ ವರೆಗೆ ಆದ ವೆಚ್ಚ	ಷರಾ
1.	ಇರಾ ಗ್ರಾಮದ ಸುವರ್ಣಬೈಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ	9.05	42.17	0.57	ಕಾಮಗಾರಿ ಭೌತಿಕವಾಗಿ ಪೂರ್ಣ ಗೊಂಡಿದೆ

ದುರಸ್ತಿಗೊಳಿಸಲಾದ ಯೋಜನೆ

ಕ್ರ. ಸಂ.	ಯೋಜನೆಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	6:04 ರವರೆಗೆ ಆದ ವೆಚ್ಚ	ಷರಾ
1.	ಕೊಳ್ನಾಡು ಗ್ರಾಮದ ನಕ್ಕರೆಕಾಡು ಎಂಬಲ್ಲಿ ಕಿಂಡಿ ಅಣೆಕಟ್ಟಿನ ದುರಸ್ತಿ	3.00	2.27	ಕಾಮಗಾರಿ ಪೂರ್ಣಗೊಂಡಿದೆ
2.	ಸಾಲೆತ್ತೂರು ಗ್ರಾಮದ ಉಳಿಯತ್ತಡ್ಕ ಎಂಬಲ್ಲಿ ಕಿಂಡಿ ಅಣೆಕಟ್ಟಿನ ದುರಸ್ತಿ	3.00	–	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ

....

134 (154) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಹೊಸತಾಗಿ ತರುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಅವುಗಳ ವಿವರಗಳೇನು;

ಆ) ರಾಜ್ಯದಲ್ಲಿ ಎಷ್ಟು ಬೃಹತ್ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ; ಎಷ್ಟು ಅಪೂರ್ಣಗೊಂಡಿವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು – ರಾಜ್ಯದಲ್ಲಿ ನಾಲ್ಕು ನೂತನ ಬೃಹತ್ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವ ಉದ್ದೇಶವಿದೆ. ಅವುಗಳು. ರಾಮತಾಳ ಏತ ನೀರಾವರಿ ಭದ್ರಾ ಮೇಲ್ದಂಡೆ, ನೇತ್ರಾವತಿ ತಿರುವು ಹಾಗೂ ಸ್ವರ್ಣ ಯೋಜನೆಗಳು.